# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

## ಎಸ್ ಸಿ ನಂ.95/2024

**ಸಿಡಬ್ಲ್ಯೂ: 1/ಪಿಡಬ್ಲ್ಯೂ: 1**
**ದಿನಾಂಕ: 29.08.2025**

**ಪ್ರಮಾಣ ವಚನ ಭೋಧಿಸಲಾಯಿತು.**

| | |
|---|---|
| ಸಾಕ್ಷಿದಾರನ/ಳ ಹೆಸರು | – ಶ್ರೀ ನಾಮದೇವ ಮಾಂಡ್ರೆ |
| ತಂದೆಯ ಹೆಸರು | – ಶ್ರೀ ಯಲ್ಲಪ್ಪ |
| ವಯಸ್ಸು | – 36 ವರ್ಷ |
| ಉದ್ಯೋಗ | – ಟೇಲರಿಂಗ ಕೆಲಸ |
| ವಾಸಸ್ಥಳ | – ಚನ್ನಪಟ್ಟಣ, ತಾ: ಶಿರಹಟ್ಟಿ |

## ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ

1. ನನಗೆ ಚಾಸಾ:8 ಶ್ರೀ ಶರಣಯ್ಯ ಹಿರೇಮಠ, ಚಾಸಾ:9 ಶ್ರೀ ನಿಂಗಪ್ಪ ಹರಿಜನ ಹಾಗೂ ಚಾಸಾ: 10 ಶ್ರೀ ನಾಮದೇವ ಮಾಂಡ್ರೆ ರವರ ಪರಿಚಯ ಇರುತ್ತದೆ. ಚಾಸಾ:10 ನನ್ನ ತಮ್ಮ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇರುತ್ತದೆ. ಆರೋಪಿ ಅಕ್ಕಿಗುಂದ ತಾಂಡಾದವರು.

2. ನಾವು ಲಕ್ಷ್ಮೇಶ್ವರಕ್ಕೆ ಹೋಗಬೇಕಾದರೆ ಅಕ್ಕಿಗುಂದ ತಾಂಡಾದ ಮೇಲೆಯೇ ಹೋಗಬೇಕಾಗುತ್ತದೆ. 2014 ರಲ್ಲಿ ಆರೋಪಿ ಚಾಸಾ:10 ನನ್ನ ತಮ್ಮನ ಮೋಟಾರಸೈಕಲಗೆ ಅಪಘಾತಪಡಿಸಿದ್ದು, ನನ್ನ ತಮ್ಮ ಸದರಿ ಅಪಘಾತದಿಂದ ಗಾಯಗೊಂಡಿದ್ದರೂ ಆ ಕಾರಣ ಆತ ಆರೋಪಿಯ ವಿರುದ್ದ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದರು. ಅದರಂತೆ ನ್ಯಾಯಾಲಯ ಪರಿಹಾರವನ್ನು ನೀಡುವಂತೆ ಆದೇಶ ಮಾಡಿರುತ್ತದೆ.

3. ನ್ಯಾಯಾಲಯದ ಆದೇಶವಾದ ನಂತರ ಆರೋಪಿ ನಾವು ಸಿಕ್ಕ ಸಮಯದಲ್ಲಿ ತಾನು ಕೊಟ್ಟಷ್ಟು ಪಡೆದುಕೊಳ್ಳಬೇಕು ಇಲ್ಲವಾದರೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದನು. ಪರಿಹಾರದ ಹಣವನ್ನು ಆತ ನಮಗೆ ನೀಡಿರುವುದಿಲ್ಲ. ಆತ ಪರಿಹಾರದ ಹಣ ನೀಡದೇಇದ್ದ ಕಾರಣ ನ್ಯಾಯಾಲಯ ಆರೋಪಿಯ ವಿರುದ್ದ ಅರೆಸ್ಟ ವಾರಂಟ ನೀಡಿದ್ದು ಇದರಿಂದ ಆರೋಪಿ ಹತಾಶೆಗೂಂಡಿದ್ದನು.

4. ದಿ:10.02.2024 ರಂದು ನಾನು ನನ್ನ ವೈಯಕ್ತಿಕ ಕೆಲಸದ ಮೇಲೆ ಲಕ್ಷ್ಮೇಶ್ವರಕ್ಕೆ

ಹೋಗಿದ್ದೆನು. ನಾನು ಕೆಲಸ ಮುಗಿಸಿಕೊಂಡು ಅಕ್ಕಿಗುಂದ ತಾಂಡಾ ಮಾರ್ಗವಾಗಿ ತಮ್ಮ ಊರಿಗೆ ಹೋಗುತ್ತಿದ್ದಾಗ ಸಂಜೆ 6.00 ಘಂಟೆ ಸಮಯದಲ್ಲಿ ಚನ್ನಪಟ್ಟಣದ ಮಾರ್ಗದಿಂದ ನೀಲಪ್ಪ ಹರಿಜನ ಮತ್ತು ಆರೋಪಿ ಕಿರಣ ಲಮಾಣಿ ರವರು ಚಾಸಾಃ8 ಶರಣಯ್ಯ ಹಿರೇಮಠ ರವರ ಹೊಲದ ಹತ್ತಿರ ಅವರ ಬೈಕ ಸಂಖ್ಯೆ ಕೆಎ 26 ಇಇ 1425 ರಿಂದ ನನ್ನ ಮೋಟಾರಸೈಕಲ ನಂ ಕೆಎ 26 ಇಡಿ 2661 ನ್ನು ಅಡ್ಡಗಟ್ಟಿ ದರು. ಅವರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ತಾವು ಕೊಟ್ಟಷ್ಟು ರೊಕ್ಕ ಪಡೆದುಕೊಳ್ಳಬೇಕು ಇಲ್ಲವಾದಲ್ಲಿ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿ ಕಲ್ಲಿನಿಂದ ನನ್ನ ತಲೆಗೆ ಹಲ್ಲೆ ಮಾಡಿದರು. ಇದರಿಂದ ನನಗೆ ರಕ್ತಗಾಯವಾಯಿತು. ಅವರಿಂದ ತಪ್ಪಿಸಿಕೊಂಡು ನಾನು ಚಾಸಾಃ8 ರವರ ಹೊಲದ ಮೂಲಕ ಓಡಿ ಹೋದೆನು. ಆದರೂ ಸಹ ಆರೋಪಿತರು ನನ್ನನ್ನು ಹಿಂಬಾಲಿಸಿ ಕಲ್ಲಿನಿಂದ ಮತ್ತು ಕಟ್ಟಿಗೆಯಿಂದ ತಲೆಗೆ ಎದೆಗೆ ಮತ್ತು ಮೈಗೆ ಹಲ್ಲೆ ಮಾಡಿದರು. ನೀಲಪ್ಪ ಹರಿಜನ ರವರೂ ಸಹ ನನಗೆ ಕೈಯಿಂದ ಹಲ್ಲೆ ಮಾಡಿದರು. ಆತನು ಆರೋಪಿಗೆ ನನ್ನನ್ನು ಕೊಲೆ ಮಾಡುವಂತೆ ಪ್ರಚೋದನೆ ಮಾಡುತ್ತಿದ್ದನು.

5. ಅಷ್ಟರಲ್ಲಿ ಚಾಸಾಃ8 ನನ್ನ ಕಣ್ಣಿಗೆ ಬಿದ್ದಿದ್ದು ಅವರನ್ನು ಕೂಗಿ ಕರೆದನು. ನನ್ನ ಕೂಗನ್ನು ಕೇಳಿ ಅವರು ಸ್ಥಳಕ್ಕೆ ಬಂದಿದ್ದು ಅವರು ಜಗಳ ಬಿಡಿಸುವಷ್ಟರಲ್ಲಿ ಆರೋಪಿ ನನಗೆ ಕಾಲಿನಿಂದ ಒದ್ದು ಕೆಳಗೆ ಬೀಳಿಸಿ, ಕೈಯಿಂದ ಎದೆಗೆ ಗುದ್ದಿ ಕಾಲಿನಿಂದ ಪುನಃ ತೊಡೆಗೆ ಒದ್ದು ಗಾಯಪಡಿಸಿದನು. ನನ್ನನ್ನು ಹೊಡೆಯುತ್ತಿದ್ದನು ನೋಡಿ ಅಲ್ಲಿಯೇ ಇದ್ದ ಚಾಸಾಃ9 ಶ್ರೀ ನಿಂಗಪ್ಪ ಹರಿಜನ ಸ್ಥಳಕ್ಕೆ ಓಡಿ ಬಂದರು. ನಂತರ ಚಾಸಾಃ8 ಮತ್ತು ಚಾಸಾಃ9 ನನ್ನನ್ನು ಆರೋಪಿ ಮತ್ತು ನೀಲಪ್ಪ ಹರಿಜನ ರವರಿಂದ ಬಿಡಿಸಿಕೊಂಡರು. ನಂತರ ಆರೋಪಿತರು ಇವರು ಬಂದಿದ್ದಾರೆಂದು ಉಳಿದುಕೊಂಡಿದ್ದಿ ಇಲ್ಲವಾದಲ್ಲಿ ನಿನ್ನನ್ನು ಕೊಲೆ ಮಾಡುತ್ತಿದ್ದೇವೆ ಎಂದು ಬೆದರಿಕೆ ಹಾಕಿದರು. ಆರೋಪಿತರಿಂದ ತಪ್ಪಿಸಿಕೊಂಡು ನಾನು ಮೋಟಾರಸೈಕಲ ಇರುವ ಸ್ಥಳಕ್ಕೆ ಬಂದು ನಿಂತುಕೊಂಡೆನು. ನಂತರ ಆರೋಪಿ ಮತ್ತು ನೀಲಪ್ಪ ಹರಿಜನ ತಾವು ಕೊಟ್ಟಷ್ಟು ಹಣ ಪಡೆದುಕೊಳ್ಳಬೇಕು ಇಲ್ಲವಾದರೆ ನಿನ್ನನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋದರು.

6. ನಂತರ ನಾನು ನನ್ನ ತಾಯಿ ಮತ್ತು ತಮ್ಮನಿಗೆ ಘಟನೆಯ ಬಗ್ಗೆ ವಿಷಯ ತಿಳಿಸಿದ್ದು ನನ್ನ ತಮ್ಮ ಸ್ಥಳಕ್ಕೆ ಬಂದರು. ನಂತರ ನಾವು ಶಿರಹಟ್ಟಿಯ ತಾಲೂಕ ಆಸ್ಪತ್ರೆಗೆ ಹೋಗಿರುತ್ತೇವೆ. ಅದೇ ದಿನ ರಾತ್ರಿ ಪೊಲೀಸರು ಆಸ್ಪತ್ರೆಗೆ ಬಂದಿದ್ದು ನಾನು ಪೊಲೀಸರಿಗೆ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸದರಿಯವರು ಮಾರನೇ ದಿನ ಈ ಪ್ರಕರಣ ತಮಗೆ ಬರುವುದಿಲ್ಲ, ಲಕ್ಷ್ಮೇಶ್ವರ ಪೊಲೀಸ ಠಾಣೆಗೆ ಬರುತ್ತದೆ. ಅವರಿಗೆ ದೂರು ನೀಡುವಂತೆ ತಿಳಿಸಿದರು.

7. ಮಾರನೇ ದಿನ ಅಂದರೆ ದಿಃ11.02.2024 ರಂದು ಬೆಳಿಗ್ಗೆ 9.30 ರಿಂದ 10.00 ಘಂಟೆ ಅವಧಿಯಲ್ಲಿ ಪೊಲೀಸರು ಶಿರಹಟ್ಟಿ ತಾಲೂಕ ಆಸ್ಪತ್ರೆಗೆ ಬಂದಿದ್ದು ನಾನು ಪೊಲೀಸರಿಗೆ ದೂರನ್ನು ಬರೆದುಕೊಟ್ಟಿರುತ್ತೇನೆ. ನಾನು ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ದೂರನ್ನು **ನಿಪಿಃ1** ಎಂದು

ಸಾಕ್ಷಿ ಸಹಿಯನ್ನು **ನಿಪಿ:1(ಎ)** ಎಂದು ಗುರುತಿಸಲಾಯಿತು.

8. ದಿ:12.02.2024 ರಂದು ಪೊಲೀಸರು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದರು. ಆ ಸಮಯದಲ್ಲಿ ಚಾಸಾ:2 ಶ್ರೀ ದೇವಪ್ಪ ಲಮಾಣಿ ಮತ್ತು ಚಾಸಾ: 3 ಶ್ರೀ ಜಗದೀಶ ದೊಡ್ಡಮನಿ ರವರು ಸ್ಥಳದಲ್ಲಿ ಇದ್ದರು. ನಾನು ಪೊಲೀಸರಿಗೆ ಘಟನೆ ನಡೆದ ಸ್ಥಳವನ್ನು ತೋರಿಸಿದೆನು. ಆ ಸಮಯದಲ್ಲಿ ಸ್ಥಳದ ಚಿತ್ರೀಕರಣ ಮಾಡಿಕೊಂಡು ಪೋಟೊ ತೆಗೆದುಕೊಂಡರು. ಅದೇ ರೀತಿ ನಾನು ಪೊಲೀಸರಿಗೆ ಆರೋಪಿ ಮತ್ತು ನೀಲಪ್ಪ ಹರಿಜನ ರವರು ನನಗೆ ಹಲ್ಲೆ ಮಾಡಿದ ಕಲ್ಲು ಮತ್ತು ದೊಣ್ಣೆಗಳನ್ನು ತೋರಿಸಿದೆನು. ಪೊಲೀಸರು ಕಲ್ಲುಗಳನ್ನು ಮಾತ್ರ ತೆಗೆದುಕೊಂಡರು. ಸದರಿ ಪ್ರಕ್ರಿಯೆಯನ್ನು ಮಧ್ಯಾಹ್ನ 2.00 ರಿಂದ 3.30 ರವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆ, ವಿಡಿಯೋ, ಪೊಟೊಗಳು ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ.

9. ಸಾಕ್ಷಿ ದಿ:12.02.2024 ರ ಸ್ಥಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ಪಂಚನಾಮೆಯನ್ನು **ನಿಪಿ:2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ:2(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ತಾನು ಇರುವ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಒಟ್ಟಾರೆಯಾಗಿ ನಿಪಿ: 3 ಎಂದು ಗುರುತಿಸಲಾಯಿತು.

10. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎರಡು ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾರೆಯಾಗಿ **ಮು ಮಾ 1** ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿದ್ದ ಒಂದು ಸಿ ಡಿ ಯನ್ನು ನ್ಯಾಯಾಲಯದ ಕಂಪ್ಯೂಟರನಲ್ಲಿ ಪ್ಲೇ ಮಾಡಿ ನೋಡಲಾಗಿ, ಅದರಲ್ಲಿ ನಾಲ್ಕು ಪೋಟೊಗಳು ಇರುತ್ತವೆ. ಸಾಕ್ಷಿ ಅದರಲ್ಲಿ ಎರಡು ಪೋಟೋಗಳನ್ನು ನೋಡಿ, ಅವುಗಳನ್ನು ಪಂಚನಾಮೆ ಕಾಲಕ್ಕೆ ತೆಗೆಯಲಾಗಿರುತ್ತವೆ ಎಂದು ಗುರುತಿಸಿರುತ್ತಾರೆ. ಆ ಕಾರಣ ಸಿ ಡಿ ಯನ್ನು **ನಿಪಿ: 4** ಎಂದು ಗುರುತಿಸಲಾಯಿತು.

12. ಘಟನೆಯ ದಿನ ನಾನು ಪಿಂಕ ಕಲರ ಬಣ್ಣದ ತುಂಬು ತೋಳಿನ ಅಂಗಿ, ಬಿಳಿಯ ಬನಿಯನ್ ಧರಿಸಿದ್ದೆನು. ಘಟನೆಯ ಸಮಯದಲ್ಲಿ ನನ್ನ ಅಂಗಿ ಮತ್ತು ಬನಿಯನ್ ರಕ್ತವಾಗಿದ್ದವು. ದಿ:12.02.2024 ರಂದು ಸಂಜೆ 5.30 ರಿಂದ 6.00 ಘಂಟೆಯ ಅವಧಿಯಲ್ಲಿ ರಕ್ತವಾಗಿದ್ದ ನನ್ನ ಅಂಗಿ ಮತ್ತು ಬನಿಯನಗಳನ್ನು ತನಿಖಾಧಿಕಾರಿಯ ಮುಂದೆ ಹಾಜರಪಡಿಸಿದೆನು. ಅವುಗಳನ್ನು ತನಿಖಾಧಿಕಾರಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡರು. ಆ ಸಮಯದಲ್ಲಿ ಪೋಟೊ ತೆಗೆದು, ಚಿತ್ರೀಕರಣ ಮಾಡಿರುತ್ತಾರೆ.

13. ನಾನು ಸದರಿ ಪಂಚನಾಮೆಯನ್ನು, ಪೋಟೊ, ವಿಡಿಯೋ ಮತ್ತು ಬಟ್ಟೆಗಳನ್ನು

ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯನ್ನು **ನಿಪಿಃ 5** ಎಂದು ಸಾಕ್ಷಿಯ ಸಹಿಯನ್ನು **ನಿಪಿಃ 5(ಎ)** ಎಂದು ಗುರುತಿಸಲಾಯಿತು.

14. ತೆರೆದ ನ್ಯಾಯಾಲಯದಲ್ಲಿ ಪಿಂಕ ಬಣ್ಣದ ತುಂಬು ತೋಳಿನ ಶರ್ಟ ಇದೆ ಎಂದು ಹೇಳಲಾದ ಒಂದು ಸೀಲ್ ಮಾಡಲಾದ ಎನವಲಪನ್ನು ತೆರೆದು ನೋಡಲಾಗಿ ಅದರಲ್ಲಿ ಪಿಂಕ ಬಣ್ಣದ ರಕ್ತ ಹತ್ತಿದ ತುಂಬು ತೋಳಿನ ಶರ್ಟ ಇರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ಅದನ್ನು **ಮು ಮಾ 2** ಎಂದು ಗುರುತಿಸಲಾಯಿತು.

15. ತೆರೆದ ನ್ಯಾಯಾಲಯದಲ್ಲಿ ಬಿಳಿ ಬಣ್ಣದ ಬನಿಯನ್ ಇದೆ ಎಂದು ಹೇಳಲಾದ ಒಂದು ಸೀಲ್ ಮಾಡಲಾದ ಎನವಲಪನ್ನು ತೆರೆದು ನೋಡಲಾಗಿ ಅದರಲ್ಲಿ ಬಿಳಿ ಬಣ್ಣದ ರಕ್ತ ಹತ್ತಿದ ಬನಿಯನ್ ಇರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ಅದನ್ನು **ಮು ಮಾ 3** ಎಂದು ಗುರುತಿಸಲಾಯಿತು.

16. ಆರೋಪಿ ಪರಿಹಾರ ನೀಡಬೇಕೆಂದು ನ್ಯಾಯಾಲಯವು ಹೊರಡಿಸಿದ ಆದೇಶದ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಕಡತದಲ್ಲಿ ಸದರಿ ಆದೇಶದ ಜರಾಕ್ಸ ಪ್ರತಿ ಮಾತ್ರ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಯ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಆರೋಪಿತರು ಘಟನಾ ಸ್ಥಳಕ್ಕೆ ಬಂದ ಮೋಟಾರಸೈಕಲ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿದ್ದ ಎರಡು ಭಾವಚಿತ್ರಗಳನ್ನು ನೋಡಿ ಆರೋಪಿ ಮತ್ತು ನೀಲಪ್ಪ ಹರಿಜನರವರು ಸ್ಥಳಕ್ಕೆ ಬಂದ ಮೋಟಾರಸೈಕಲ ಇದೆ ಆಗಿರುತ್ತದೆ ಎಂದು ಗುರುತಿಸಿರುತ್ತಾರೆ. ಆ ಕಾರಣ ಅವುಗಳನ್ನು ಒಟ್ಟಾರೆಯಾಗಿ **ನಿಪಿಃ 6** ಎಂದು ಗುರುತಿಸಲಾಯಿತು.

17. ದಿಃ 06.04.2024 ರಂದು ನಾನು ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ ಹೇಳಿಕೆ ನೀಡಿರುತ್ತೇನೆ. ನಾನು ಸದರಿ ನಾನು ಸದರಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಕಡತಲ್ಲಿರುವ ತನ್ನ ಹೇಳಿಕೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ಹೇಳಿಕೆಯನ್ನು **ನಿಪಿಃ7** ಎಂದು, ಸಾಕ್ಷಿ ಸಹಿಯನ್ನು **ನಿಪಿಃ7(ಎ)** ಎಂದು ಗುರುತಿಸಲಾಯಿತು.

18. ನಾನು ಆರೋಪಿ ಮತ್ತು ನೀಲಪ್ಪ ಹರಿಜನ ರವರ ವಿರುದ್ದ ದೂರನ್ನು ದಾಖಲು ಮಾಡಿದ್ದರೂ ಸಹ ಪೊಲೀಸರು ನೀಲಪ್ಪ ಹರಿಜನ ರವರನ್ನು ಈ ಪ್ರಕರಣದಿಂದ ಕೈ ಬಿಟ್ಟಿರುತ್ತಾರೆ. ನಾನು ಆತನನ್ನು ನೋಡಿದರೆ ಗುರುತಿಸುತ್ತೇನೆ.

19. ನಾನು ಜೈಲಿನಿಂದ ಹೊರಗಡೆ ಬಂದ ನಂತರ ಆರೋಪಿ ನಮ್ಮ ಮನೆಯ ಬಳಿ ಬಂದು ಈತ ಹೇಗೆ ಬದುಕುತ್ತಾನೆ ನೋಡೋಣ ಎಂದು ಧಮಕಿ ಹಾಕಿರುತ್ತಾನೆ. ನನಗೆ ಜೀವ ಬೆದರಿಕೆ ಇದ್ದ ಕಾರಣ ನಾನು ಪೊಲೀಸ ಮೇಲಾಧಿಕಾರಿಗಳಿಗೆ ದೂರು ದಾಖಲಿದ್ದು ಅದು ಇನ್ನೂ

ಚಾಲ್ತಿಯಲ್ಲಿರುತ್ತದೆ. ನನಗೆ ಜೀವ ಬೆದರಿಕೆ ಇರುವ ಕಾರಣ ನಾನು ಈಗ ನಮ್ಮ ಸಂಬಂಧಿಕರ ಮನೆಯಲ್ಲಿ ವಾಸವಿರುತ್ತೇನೆ. ನಾನು ಊರಿನಲ್ಲಿ ವಾಸವಿರುವುದಿಲ್ಲ.

20. ಆರೋಪಿ ಮತ್ತು ನೀಲಪ್ಪ ಹರಿಜನ ಜೀವ ಬೆದರಿಕೆ ಹಾಕುತ್ತಿದ್ದರಿಂದ ಯಾವಾಗಲೂ ಜಿ ಪಿ ಎಸ್ ವಿಡಿಯೋ ಆನ್ ಮಾಡಿಕೊಂಡೆ ಓಡಾಡುತ್ತಿದ್ದೆನು. ಘಟನೆಯ ದಿನವೂ ಸಹ ನಾನು ನನ್ನ ಜಿ ಪಿ ಎಸ್ ವಿಡಿಯೋ ಆನ್ ಮಾಡಿಕೊಂಡಿದ್ದೆನು. ನಡೆದ ಘಟನ ಸದರಿ ವಿಡಿಯೋದಲ್ಲಿ ದಾಖಲಾಗಿರುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ಪೋಟೋಗಳೂ ಸಹ ಇವೆ.

21. ನಾನು ತನಿಖಾಧಿಕಾರಿಗೆ ನನ್ನ ರಕ್ತದ ಗುಂಪಿನ ಪ್ರಮಾಣಪತ್ರವನ್ನು ನೀಡಿರುತ್ತೇನೆ. ನ್ಯಾಯಾಲಯದ ಕಡತದಲ್ಲಿ ಸದರಿ ಪ್ರಮಾಣಪತ್ರದ ನಕಲು ಪ್ರತಿ ಮಾತ್ರ ಇರುತ್ತದೆ. ನನ್ನ ರಕ್ತದ ಗುಂಪು ಓ ಪಾಸಿಟಿವ್ ಆಗಿರುತ್ತದೆ.

22. ನ್ಯಾಯಾಲಯದ ಕಡತಲ್ಲಿದ್ದ ಒಂದು ಡಿ ವಿ ಡಿ ಯನ್ನು ನ್ಯಾಯಾಲಯದ ಕಂಪ್ಯೂಟರನಲ್ಲಿ ಪ್ಲೇ ಮಾಡಿ ನೋಡಲಾಗಿ, ಅದರಲ್ಲಿ ಮೂರು ವಿಡಿಯೋಗಳು ಇರುತ್ತವೆ. ಅದರಲ್ಲಿ ಮಹಜರ ಸಮಯದಲ್ಲಿ ಚಿತ್ರೀಕರಣ ಮಾಡಲಾದ ಎರಡು ವಿಡಿಯೋಗಳು ಇರುವುದಾಗಿ ಸಾಕ್ಷಿ ಗುರುತಿಸಿರುತ್ತಾರೆ. ಆ ಕಾರಣ ಡಿ ವಿ ಡಿ ಯನ್ನು **ನಿಪಿಃ 8** ಎಂದು ಗುರುತಿಸಲಾಯಿತು.

(ವಿಶೇಷ ಸರ್ಕಾರಿ ಅಭಿಯೋಜಕರು ವಿಡಿಯೋವನ್ನು ಮತ್ತು ಪೊಟೋಗಳನ್ನು ಹಾಜರಪಡಿಸಲು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.